## 2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಚನ್ನರಾಯಪಟ್ಟಣ

## ಸಿ.ಸಿ. ಸಂಖ್ಯೆ: 880/2020

**ಪಿರ್ಯಾದಿದಾರರು:** ರಾಜ್ಯಪರ ಪೊಲೀಸರು,
ನುಗ್ಗೇಹಳ್ಳಿ ಪೊಲೀಸ್ ಠಾಣೆ.

**ವಿರುದ್ಧ**

**ಆರೋಪಿತರು:**

1. ಸುಭಾಷ್‌ಚಂದ್ರ ಬಿನ್ ಜಗದೀಶ,
28 ವರ್ಷ ವಯಸ್ಸು,

2. ಜಗದೀಶ ಬಿ.ಎನ್.,
ಬಿನ್ ಲೇಟ್ ನಾರಾಯಣಗೌಡ,
52 ವರ್ಷ ವಯಸ್ಸು,

3. ಚಂದ್ರಮ್ಮ ಕೋಂ ಜಗದೀಶ ಬಿ.ಎನ್.,
48 ವರ್ಷ ವಯಸ್ಸು,

ಎಲ್ಲರೂ ವಾಸ: ಬಾಣನಕೆರೆ ಗ್ರಾಮ,
ನುಗ್ಗೇಹಳ್ಳಿ ಹೋಬಳಿ,
ಚನ್ನರಾಯಪಟ್ಟಣ ತಾಲ್ಲೂಕು.

## ದೋಷಾರೋಪಣೆ

**ಶ್ರೀ ದೀಪು ಬಿ.ಸಿ.,** 2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಚನ್ನರಾಯಪಟ್ಟಣ, ಆದ ನಾನು ಆರೋಪಿಗಳಾದ ನಿಮ್ಮ ಮೇಲೆ ಹೊರಿಸುವ ದೋಷಾರೋಪಣೆ ಏನೆಂದರೆ,

ದಿನಾಂಕ: 29-05-2020 ರಂದು ಸಂಜೆ 6.00 ಗಂಟೆ ಸಮಯದಲ್ಲಿ, ನುಗ್ಗೇಹಳ್ಳಿ ಪೋಲೀಸ್ ಠಾಣಾ ಸರಹದ್ದಿಗೆ ಸೇರಿದ ಬಾಣನಕೆರೆ ಗ್ರಾಮದ ಸಾಕ್ಷಿ-1 ರಿಂದ 3 ರವರು ತಮ್ಮ ಮನೆಯ ಹತ್ತಿರ ಇದ್ದಾಗ, ಅದೇ ಸಮಯಕ್ಕೆ ಆರೋಪಿಗಳಾದ

ನೀವುಗಳು ಸಮಾನ ಉದ್ದೇಶದಿಂದ ಸಾಕ್ಷಿ-1 ರವರ ಮನೆಯ ಹತ್ತಿರ ಬಂದು, ಸಾಕ್ಷಿ-1 ರಿಂದ 3 ರವರನ್ನು ಕುರಿತು, ಅವರುಗಳು ಕುಪಿತರಾಗಿ ಶಾಂತಿಭಂಗವನ್ನುಂಟುಮಾಡಲಿ ಎಂಬ ಉದ್ದೇಶದಿಂದ, ಏನ್ರೋ ಲೋಫರ್ ನನ್ನ ಮಕ್ಕಳಾ ನಮ್ಮ ಜಮೀನಿನಲ್ಲಿ ಯಾಕೆ ಕೆಲಸ ಮಾಡಿದ್ದೀರಿ ಎಂದು ಅವಾಚ್ಯ ಶಬ್ಧಗಳಿಂದು ಬೈದು, ಆ ಮೂಲಕ ಆರೋಪಿಗಳಾದ ನೀವು **ಭಾ.ದಂ.ಸಂ. ಕಲಂಃ 504 ಸಹವಾಚಕ ಕಲಂಃ 34** ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಎಸಗಿರುತ್ತೀರಿ.

**2)** ಮೇಲೆ ಹೇಳಿದ ದಿನ, ಸ್ಥಳ ಮತ್ತು ಸಮಯದಲ್ಲಿ ಆರೋಪಿಗಳಾದ ನೀವು ಸಮಾನ ಉದ್ದೇಶವನ್ನು ಹೊಂದಿ, 1 ನೇ ಆರೋಪಿಯಾದ ನೀವು ನಿಮ್ಮ ಸ್ವಇಚ್ಚೆಯಿಂದ ನಿಮ್ಮ ಕೈಯಲ್ಲಿದ್ದ ಮಾರಕಾಯುಧವಾದ ಚಾಕುವಿನಿಂದ ಸಾಕ್ಷಿ-2 ರವರ ತಲೆಗೆ ಹೊಡೆದು ಸಾಮಾನ್ಯ ಸ್ವರೂಪದ ಗಾಯಪಡಿಸಿ, ಸಾಕ್ಷಿ-3 ರವರು ಜಗಳ ಬಿಡಿಸಲು ಹೋದಾಗ 2 ನೇ ಆರೋಪಿಯಾದ ನೀವು ನಿಮ್ಮ ಸ್ವ ಇಚ್ಚೆಯಿಂದ ಮಾರಕಾಯುಧವಾದ ದೊಣ್ಣೆಯಿಂದ ಸಾಕ್ಷಿ-2 ರವರ ಮೈಕೈಗೆ ಹೊಡೆದು ನೋವುಂಟು ಪಡಿಸಿ, 1 ನೇ ಆರೋಪಿಯಾದ ನೀವು ನಿಮ್ಮ ಸ್ವ ಇಚ್ಚೆಯಿಂದ ಮಾರಕಾಯುಧವಾದ ಚಾಕುವಿನಿಂದ ಸಾಕ್ಷಿ-1 ರವರ ಎಡಕೈಗೆ ಕುಯ್ದು ಸಾಮಾನ್ಯ ಸ್ವರೂಪದ ಗಾಯಪಡಿಸಿ, ಆ ಮೂಲಕ ಆರೋಪಿಗಳಾದ ನೀವು **ಭಾ.ದಂ.ಸಂ. ಕಲಂಃ 324 ಸಹವಾಚಕ ಕಲಂಃ 34** ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಎಸಗಿರುತ್ತೀರಿ.

**3)** ಮೇಲೆ ಹೇಳಿದ ದಿನ, ಸ್ಥಳ ಮತ್ತು ಸಮಯದಲ್ಲಿ ಆರೋಪಿಗಳಾದ ನೀವು ಸಮಾನ ಉದ್ದೇಶವನ್ನು ಹೊಂದಿ, 3 ನೇ ಆರೋಪಿಯಾದ ನೀವು ನಿಮ್ಮ ಸ್ವ ಇಚ್ಚೆಯಿಂದ ಸಾಕ್ಷಿ-1 ರವರಿಗೆ ಕೈಗಳಿಂದ ಮೈಕೈಗೆ ಹೊಡೆದು ನೋವುಂಟುಪಡಿಸಿ, ಆ ಮೂಲಕ ಆರೋಪಿಗಳಾದ ನೀವು **ಭಾ.ದಂ.ಸಂ. ಕಲಂಃ 323 ಸಹವಾಚಕ ಕಲಂಃ 34** ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಎಸಗಿರುತ್ತೀರಿ.

**4)** ಮೇಲೆ ಹೇಳಿದ ದಿನ, ಸ್ಥಳ ಮತ್ತು ಸಮಯದಲ್ಲಿ ಆರೋಪಿಗಳಾದ ನೀವು ಸಮಾನ ಉದ್ದೇಶವನ್ನು ಹೊಂದಿ, ಸಾಕ್ಷಿ-1 ರಿಂದ ಸಾಕ್ಷಿ-3 ರವರನ್ನು ಕುರಿತು ಈ ದಿನ ಬದುಕಿದ್ದೀರಾ, ಜಮೀನಿಗೆ ಬಂದರೆ ನಿಮ್ಮನ್ನು ಕೊಲೆ ಮಾಡದೆ ಬಿಡುವುದಿಲ್ಲ ಎಂದು

ಕೊಲೆ ಬೆದರಿಕೆ ಹಾಕಿ ಅಪರಾಧಿಕ ಭಯೋತ್ಪಾದನೆ ಉಂಟುಮಾಡಿ, ಆ ಮೂಲಕ ಆರೋಪಿಗಳಾದ ನೀವು **ಭಾ.ದಂ.ಸಂ. ಕಲಂಃ 506 ಸಹವಾಚಕ ಕಲಂಃ 34** ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಎಸಗಿರುತ್ತೀರಿ.

ಸದರಿ ಆರೋಪಕ್ಕೆ ಆರೋಪಿಗಳಾದ ನೀವು ಈ ನ್ಯಾಯಾಲಯದಲ್ಲಿ ವಿಚಾರಣೆಗೆ ಗುರಿಯಾಗತಕ್ಕದ್ದು ಎಂದು ನಾನು ಈ ಮೂಲಕ ನಿರ್ಧೇಶಿಸುತ್ತೇನೆ.

ದಿನಾಂಕಃ 21-07-2022.

(ದೀಪು ಬಿ.ಸಿ.)
2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚನ್ನರಾಯಪಟ್ಟಣ.

**2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಚನ್ನರಾಯಪಟ್ಟಣ**

**ಸಿ.ಸಿ. ಸಂಖ್ಯೆ 880/2020**

**ಪಿರ್ಯಾದಿದಾರರುಃ** ರಾಜ್ಯಪರ ಪೊಲೀಸರು,
ನುಗ್ಗೇಹಳ್ಳಿ ಪೊಲೀಸ್ ಠಾಣೆ.

**ವಿರುದ್ಧ**

**ಆರೋಪಿತರುಃ** 1. ಸುಭಾಷ್‌ಚಂದ್ರ ಬಿನ್ ಜಗದೀಶ,
28 ವರ್ಷ ವಯಸ್ಸು,
ವಾಸಃ ಬಾಣನಕೆರೆ ಗ್ರಾಮ,
ನುಗ್ಗೇಹಳ್ಳಿ ಹೋಬಳಿ,
ಚನ್ನರಾಯಪಟ್ಟಣ ತಾಲ್ಲೂಕು.

**ದೋಷಾರೋಪಣೆ**

**ಪ್ರಶ್ನೆ –1 ಃ** ದೋಷಾರೋಪಣೆಯನ್ನು ಓದಿ ಹೇಳಿದ್ದು ಅರ್ಥವಾಯಿತೆ ?

**ಉತ್ತರ ಃ** ಅರ್ಥವಾಯಿತು

**ಪ್ರಶ್ನೆ–2ಃ** ದೋಷಾರೋಪಣೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೆ?

**ಉತ್ತರ ಃ** ವಿಚಾರಣೆಯಾಗಬೇಕು

(ಸದರಿ ದೋಷಾರೋಪಣೆಯನ್ನು ಆರೋಪಿಗೆ ಓದಿ, ಹೇಳಿ, ಕೇಳಿ ಆರೋಪಿಯು ಕೊಟ್ಟ ಉತ್ತರವನ್ನು ಅವರ ಹೇಳಿಕೆಯಂತೆ ಬರೆದುಕೂಳ್ಳಲಾಯಿತು ಎಂದು ದೃಢೀಕರಿಸಲಾಗಿದೆ.

ದಿನಾಂಕಃ 21–07–2022

(ದೀಪು ಬಿ.ಸಿ.)
2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚನ್ನರಾಯಪಟ್ಟಣ.

**2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಚನ್ನರಾಯಪಟ್ಟಣ**

**ಸಿ.ಸಿ. ಸಂಖ್ಯೆ 880/2020**

**ಪಿರ್ಯಾದಿದಾರರುಃ** ರಾಜ್ಯಪರ ಪೊಲೀಸರು,
ನುಗ್ಗೇಹಳ್ಳಿ ಪೊಲೀಸ್ ಠಾಣೆ.

**ವಿರುದ್ಧ**

**ಆರೋಪಿತರುಃ** 2. ಜಗದೀಶ ಬಿ.ಎನ್.,
ಬಿನ್ ಲೇಟ್ ನಾರಾಯಣಗೌಡ,
52 ವರ್ಷ ವಯಸ್ಸು,
ವಾಸಃ ಬಾಣನಕೆರೆ ಗ್ರಾಮ,
ನುಗ್ಗೇಹಳ್ಳಿ ಹೋಬಳಿ,
ಚನ್ನರಾಯಪಟ್ಟಣ ತಾಲ್ಲೂಕು.

**ದೋಷಾರೋಪಣೆ**

**ಪ್ರಶ್ನೆ –1 ಃ** ದೋಷಾರೋಪಣೆಯನ್ನು ಓದಿ ಹೇಳಿದ್ದು ಅರ್ಥವಾಯಿತೆ ?

**ಉತ್ತರ ಃ** ಅರ್ಥವಾಯಿತು

**ಪ್ರಶ್ನೆ–2ಃ** ದೋಷಾರೋಪಣೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೆ?

**ಉತ್ತರ ಃ** ವಿಚಾರಣೆಯಾಗಬೇಕು

(ಸದರಿ ದೋಷಾರೋಪಣೆಯನ್ನು ಆರೋಪಿಗೆ ಓದಿ, ಹೇಳಿ, ಕೇಳಿ ಆರೋಪಿಯು ಕೊಟ್ಟ ಉತ್ತರವನ್ನು ಅವರ ಹೇಳಿಕೆಯಂತೆ ಬರೆದುಕೂಳ್ಳಲಾಯಿತು ಎಂದು ದೃಢೀಕರಿಸಲಾಗಿದೆ.

ದಿನಾಂಕಃ 21-07-2022

(ದೀಪು ಬಿ.ಸಿ.)
2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚನ್ನರಾಯಪಟ್ಟಣ

**2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಚನ್ನರಾಯಪಟ್ಟಣ**

**ಸಿ.ಸಿ. ಸಂಖ್ಯೆ: 880/2020**

**ಪಿರ್ಯಾದಿದಾರರುಃ** ರಾಜ್ಯಪರ ಪೊಲೀಸರು,
ನುಗ್ಗೇಹಳ್ಳಿ ಪೊಲೀಸ್ ಠಾಣೆ.

**ವಿರುದ್ಧ**

**ಆರೋಪಿತರುಃ** 3. ಚಂದ್ರಮ್ಮ ಕೋಂ ಜಗದೀಶ ಬಿ.ಎನ್.,
48 ವರ್ಷ ವಯಸ್ಸು,
ವಾಸಃ ಬಾಣನಕೆರೆ ಗ್ರಾಮ,
ನುಗ್ಗೇಹಳ್ಳಿ ಹೋಬಳಿ,
ಚನ್ನರಾಯಪಟ್ಟಣ ತಾಲ್ಲೂಕು.

**ದೋಷಾರೋಪಣೆ**

**ಪ್ರಶ್ನೆ –1 ಃ** ದೋಷಾರೋಪಣೆಯನ್ನು ಓದಿ ಹೇಳಿದ್ದು ಅರ್ಥವಾಯಿತೆ ?

**ಉತ್ತರ ಃ** ಅರ್ಥವಾಯಿತು

**ಪ್ರಶ್ನೆ–2ಃ** ದೋಷಾರೋಪಣೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೆ?

**ಉತ್ತರ ಃ** ವಿಚಾರಣೆಯಾಗಬೇಕು

(ಸದರಿ ದೋಷಾರೋಪಣೆಯನ್ನು ಆರೋಪಿಗೆ ಓದಿ, ಹೇಳಿ, ಕೇಳಿ ಆರೋಪಿಯು ಕೊಟ್ಟ ಉತ್ತರವನ್ನು ಅವರ ಹೇಳಿಕೆಯಂತೆ ಬರೆದುಕೂಳ್ಳಲಾಯಿತು ಎಂದು ದೃಢೀಕರಿಸಲಾಗಿದೆ.

ದಿನಾಂಕಃ 21–07–2022

(ದೀಪು ಬಿ.ಸಿ.)
2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚನ್ನರಾಯಪಟ್ಟಣ